

## ಹಾಲೇರಿ ರಾಜರ ಮೋಹಕ ಅರಮನೆ

ಮಡಿಕೇರಿ ಕೊಡಗು ಜಿಲ್ಲಾ ಕೇಂದ್ರವಾಗಿದೆ. ಹಾಲೇರಿ ವಂಶದ ಅರಸರ ಕಾಲದಲ್ಲಿ ಮುದ್ದುರಾಜ ಎಂಬಾತ 1681ರಲ್ಲಿ ಮಣ್ಣಿನ ಕೋಟೆ ಹಾಗೂ ಅರಮನೆಯನ್ನು ಕಟ್ಟಿಸಿದ್ದ. ಆತನ ಕಾಲದಲ್ಲಿ 'ಮುದ್ದುರಾಜನಕೇರಿ' ಎಂದು ಹೆಸರಿತ್ತು. ನಂತರ ಜನರ ಬಾಯಲ್ಲಿ 'ಮಡಿಕೇರಿ' ಆಯಿತೆಂಬುದು ಇತಿಹಾಸ. ಇದನ್ನೇ ಟಿಪ್ಪು ಸುಲ್ತಾನ್ ಕಲ್ಲಿನಲ್ಲಿ ಪುನರ್ ನಿರ್ಮಿಸಿ 'ಜಾಫರಾಬಾದ್' ಎಂದು ಕರೆದ. 1790ರಲ್ಲಿ ದೊಡ್ಡ ವೀರರಾಜೇಂದ್ರ ಈ ಕೋಟೆ ವಶಪಡಿಸಿಕೊಂಡಿದ್ದ. ಬಳಿಕ 1834ರಲ್ಲಿ ಬ್ರಿಟಿಷರ ಆಳ್ವಿಕೆಗೂ ಈ ಕೋಟೆ ಒಳಪಟ್ಟಿತ್ತು. ಈ ಸ್ಥಳವನ್ನು ಬ್ರಿಟೀಷರ ಕಾಲದಲ್ಲಿ 'ಮರಕೆರಾ' ಎಂದು ಉಚ್ಚರಿಸುತ್ತಿದ್ದರು. 1812ರಲ್ಲಿ ಇಮ್ಮಡಿ ಲಿಂಗರಾಜ ಒಡೆಯರ ಕಾಲದಲ್ಲಿ ನಿರ್ಮಾಣಗೊಂಡ ಈ ಅರಮನೆ ಕೊಡಗಿನ ಪಾರಂಪರಿಕ ಶೈಲಿಯಲ್ಲಿದ್ದು ರಾಜರ ಗತವೈಭವದ ದಿನಗಳನ್ನು ಸಾರುತ್ತಿದೆ.

ಸಿದ್ದೇಶ್ ಸಣ್ಣಗಿರಿ ಕೊಟ್ಟೂರು, ಮಡಿಕೇರಿ

## ಐತಿಹಾಸಿಕ ಸೊಬಗಿನ ನೀರಗುಂದ

ಚಿತ್ರದುರ್ಗದ ಹೊಸದುರ್ಗ ತಾಲ್ಲೂಕಿನ ಪುಟ್ಟ ಹಳ್ಳಿ ನೀರಗುಂದ. ಅದ್ಭುತ ಇತಿಹಾಸವನ್ನು ತನ್ನ ಒಡಲಲ್ಲಿ ಹುದುಗಿಸಿಕೊಂಡ ಈ ಹಳ್ಳಿ ಕ್ರಿ.ಪೂ.160ನೇ ಶತಮಾನದಲ್ಲೇ ನೀಲಾವತಿ ಪಟ್ಟಣವೆಂದು ಪ್ರಖ್ಯಾತವಾಗಿತ್ತಂತೆ. ಶಿಕಾರಿಪುರ ಶಾಸನದ ತ್ರಿಪದಿ ಛಂದಸ್ಸಿನಲ್ಲಿ, ಗೊಂದಲಿಗರ ಹಾಡುಗಳಲ್ಲಿ ಈ ಊರಿನ ಉಲ್ಲೇಖ ಇರುವುದು ವಿಶೇಷ ಎಂಬುದು ಇತಿಹಾಸ ತಜ್ಞರ ಅಭಿಮತ.

ಇಂತಹ ಊರಿನಲ್ಲಿ ಹಲವಾರು ಪುರಾತನ ದೇಗುಲಗಳಿದ್ದು, ಅವುಗಳಲ್ಲಿ ಬಹುಪಾಲು ದೇಗುಲಗಳು ಶಿಥಿಲಾವಸ್ಥೆ ತಲುಪಿವೆ. ರೈಸ್‌ನ ಗೆಜೆಟಿಯರ್‌ನಲ್ಲಿಯೂ ಈ ಸ್ಥಳದ ಕುರಿತು ಉಲ್ಲೇಖವಿದ್ದು, ಇದಕ್ಕೆ 'ಉದ್ಭವ ಸೋಮನಾಥಪುರ' ಎಂಬ ಹೆಸರೂ ಇತ್ತೆಂದು ಹೇಳಲಾಗಿದೆ. ಹೊಯ್ಸಳ ಸಾಮಂತ ಅರಸ ರಾಜಾ ಪರಮೇಶ್ವರ ಆಳಿದ್ದನೆಂಬ ಇತಿಹಾಸವಿರುವ ನೀಲಾವತಿಪಟ್ಟಣದ ಹೊಯ್ಸಳ ಶೈಲಿಯಲ್ಲಿರುವ ಸಿದ್ದೇಶ್ವರ ದೇವಸ್ಥಾನ ಉತ್ತಮ ಸ್ಥಿತಿಯಲ್ಲಿದೆ. ಅದು ಶಿಲ್ಪಕಲೆ ಹಾಗೂ ವಿನ್ಯಾಸದಿಂದ ಗಮನ ಸೆಳೆಯುತ್ತದೆ. ಈ ಸ್ಥಳದ ಕುರಿತಾದ ಶಿಲಾ ಶಾಸನವೂ ಇಲ್ಲಿದೆ. ಇಲ್ಲಿನ ಮಲ್ಲಿಕಾರ್ಜುನ ದೇವಾಲಯ, ಚಾಲುಕ್ಯ ಶೈಲಿಯಲ್ಲಿದ್ದು ಅದೂ ಶಿಥಿಲಾವಸ್ಥೆಯಲ್ಲಿದೆ. ಗಣೇಶನ ಗುಡಿಯ ಬೃಹತ್ ಗಣೇಶನ ವಿಗ್ರಹವನ್ನು ಹೊಸದುರ್ಗ ನಗರದ ಹೃದಯಭಾಗದಲ್ಲಿ ಪ್ರತಿಷ್ಠಾಪಿಸಲಾಗಿದೆ. ನಿರ್ವಹಣೆಯ ಕೊರತೆ, ಹಾಗೂ ಭವ್ಯ ಇತಿಹಾಸ ಕುರಿತಾದ ಸಾರ್ವಜನಿಕರ ನಿರ್ಲಕ್ಷ್ಯ ನೀಲಾವತಿ ಪಟ್ಟಣವನ್ನು ಪಾಳುಬಿದ್ದ ಗುಡಿಗಳ ಊರಾಗಿಸಿದೆ.

ಎಚ್.ಎಸ್.ನವೀನಕುಮಾರ್, ಹೊಸದುರ್ಗ

